ಹೆಮ್ಮೆ ಮೂಡಿದೆ ಈಗ. ನನ್ನ ಪತ್ನಿ ಕೆಳಜಾತಿಯ ಸ್ತ್ರೀಯೊಂದಿಗೆ ಜೊತೆಯಲ್ಲಿ ಕುಳಿತುಕೊಂಡಿದ್ದಕ್ಕಾಗಲಿ, ಹರಟೆಗಿಳಿದಿದ್ದಕ್ಕಾಗಲಿ, ನಗಾಡಿದ್ದಕ್ಕಾಗಲೀ ಆಕ್ಷೇಪಣೆ ಏನೂ ಇರಲಿಲ್ಲ ನನಗೆ. ಅವರಿಗೆ ಓದಿ ಹೇಳುವುದಕ್ಕೂ ನನ್ನ ಅಭ್ಯಂತರವಿರಲಿಲ್ಲ. ಆದರೆ, ಅವರೊಂದಿಗೆ ಅವಳು ವ್ಯವಹರಿಸುವಾಗ ತನ್ನನ್ನು ತಾನು ಸಂಪೂರ್ಣವಾಗಿ ಮರೆಯುವುದನ್ನು ನಾನು ಒಪ್ಪೆನು.

ಮೂರು ದಿನಗಳ ಹಿಂದೆ ಒಬ್ಬ ಚಮ್ಮಾರ ನನ್ನ ಬಳಿ ಬಂದ, ತನ್ನ ಭೂಮಾಲೀಕನ ಮೇಲೆ ಮೊಕದ್ದಮೆ ಹೂಡಲು. ನೋ ಡೌಟ್! ಭೂ ಮಾಲೀಕ ಅನ್ಯಾಯವೆಸಗಿದ್ದ. ಆದರೆ, ಉಚಿತ ಮೊಕದ್ದಮೆ ಹಾಕುವುದು ವಕೀಲರ ಕೆಲಸವಲ್ಲ. ಚಮ್ಮಾರನಿಗೋಸುಗ ನಾನೇಕೆ ಭೂ ಮಾಲೀಕನ ವಿರುದ್ಧ ದ್ವೇಷ ಕಟ್ಟಿಕೊಳ್ಳಲಿ? ನಾನು ಹಾಗೆ ವಕೀಲಿ ವೃತ್ತಿ ನಡೆಸಿದ್ದರೆ ಉತ್ತಮ ವೃತ್ತಿ ನನ್ನದಾಗಲಿತ್ತು ದಿಟ! ಅವನ ಗೋಳಾಟವನ್ನು ವೃಂದಾ ಮರೆಯಲ್ಲಿ ನಿಂತು ಕೇಳಿಸಿಕೊಂಡಿದ್ದಳು. ಅವನ ಕೇಸನ್ನು ಕೈಗೆತ್ತಿಕೊಳ್ಳುವಂತೆ ಒತ್ತಾಯಿಸಿದಳು ನನಗೆ. ನನ್ನೊಂದಿಗೆ ವಾಗ್ವಾದಕ್ಕಿಳಿಯಲು ತೀರ್ಮಾನಿಸಿಕೊಂಡು ನಿಂತಿದ್ದಳು. ನಾನಾದರೋ ಅವನಿಗೆ ಏನೇನೋ ನೆಪ ಹೇಳಿ ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದೆ. ಆದರೆ, ನಾನು ಅವನೊಂದಿಗೆ ಕಾನೂನು ಒಪ್ಪಂದಕ್ಕೆ ಸಹಿ ಹಾಕೋವರೆಗೂ ವೃಂದಾ ಹಿಡಿದ ಪಟ್ಟು ಬಿಡಲಿಲ್ಲ. ಇದರಿಂದಾದ ಫಲಿತಾಂಶವೆಂದರೆ ಕಳೆದ ಮೂರು ದಿನಗಳಿಂದ ನನ್ನ ಕಚೇರಿ ಮುಂದೆ ಉಚಿತ ಮೊಕದ್ದಮೆ ಪ್ರಕರಣಗಳ ಸರತಿ ಸಾಲಿನ ಬಾಲ ಬೆಳೆಯಬೇಕೆ? ಇದು ವೃಂದಾಳನ್ನು ಬಯ್ಯಲು ನನಗೆ ದಾರಿ ಮಾಡಿಕೊಟ್ಟಿತು. ಉಚಿತವಾಗಿ ಮೊಕದ್ದಮೆ ಹೂಡಲೆಂದು ಬಂದ ಪ್ರಕರಣಗಳಿಂದ ಬೇಸತ್ತ ನಾನು ವೃಂದಾಳ ಮೇಲೆ ಕೆಂಡ ಕಾರಲಾರಂಭಿಸಿದೆ.

ಈ ಕಾರಣದಿಂದಲೇ ಇರಬೇಕು ಹಿಂದಿನ ನ್ಯಾಯ ನಿಬಂಧಕರು, ಸ್ತ್ರೀಯರು ಧಾರ್ಮಿಕ ಬೋಧನೆಗಳಿಗೆ ಅನರ್ಹರೆಂದು ಯೋಚಿಸಿದ್ದರೇನೋ. ಪ್ರತಿಯೊಂದು ತತ್ತ್ವಗಳೂ ತನ್ನದೇ ಆದ ಭಿನ್ನ ಪ್ರಾಯೋಗಿಕ ಆಸಕ್ತಿ ಹೊಂದಿವೆ ಎಂಬುದನ್ನು ಸ್ತ್ರೀಯರು ಅರ್ಥಮಾಡಿಕೊಳ್ಳರು. ದೇವರು ನ್ಯಾಯವಂತನೆಂದು ನಮಗೆಲ್ಲರಿಗೂ ಗೊತ್ತಿರುವುದೆ, ಆದರೆ ನ್ಯಾಯಕ್ಕಾಗಿ ಜೀವನದಲ್ಲಿ ತನ್ನ ಸ್ಥಾನವನ್ನು ಯಾರು ತಾನೆ ಮರೆಯುತ್ತಾರೆ? ನಾವು ಸರ್ವ ವ್ಯಾಪಿ ಚೈತನ್ಯದ ಕಲ್ಪನೆಯ ಮೇಲೆ ಕಾರ್ಯ ನಿರ್ವಹಿಸಲು ಯತ್ನಿಸಿದರೆ, ಜಗತ್ತು ಆಗೆಲ್ಲ ಸಮಾನತೆಯ ಸಾಮ್ರಾಜ್ಯವಾಗಲಿದೆ, ಆದರೆ ಸಮಾನತೆಯ ತತ್ತ್ವ ಹಾಗೆ ಅಮೂರ್ತ ತತ್ವವಾಗಿ ಉಳಿಯುತ್ತದೆ, ಸಮಾನತೆಯ ರಾಜಕೀಯ ತತ್ವಗಳನ್ನು ಸಂಪಾದಿಸಲಾಗುವುದಿಲ್ಲ ಮತ್ತು ಅವು ಹಾಗೆ ಉಳಿದುಬಿಡುತ್ತವೆ. ನಾವು ಈ ಎರಡು ತತ್ವಗಳ ಬಗ್ಗೆ ಮುಕ್ತವಾಗಿ ವಾಗ್ವಾದ ಮಾಡೋಣ. ನಮ್ಮದೇ ಪ್ರಕರಣವನ್ನು ಸಶಕ್ತಗೊಳಿಸಲು ಅವುಗಳನ್ನು ಬಳಸಿಕೊಳ್ಳೋಣ, ಆದರೆ ಅವುಗಳ ಮೇಲೆಯೇ ಅವಲಂಬಿಸುವುದೆಂದರೆ ಆಗದ ಮಾತು. ಇಂತಹ ಸರಳ ವಿಷಯವನ್ನು ವೃಂದಾ ಅರಿತುಕೊಳ್ಳುವಲ್ಲಿ ವಿಫಲಳಾಗ್ತಾಳೆ ಎಂದು ನನಗೂ ಅರ್ಥವಾಗಲಿಲ್ಲ.

* * *

ವೃಂದಾ ತುಸು ಹೆಚ್ಚೆ ತಾಳ್ಮೆ ಕಳೆದುಕೊಂಡಿದ್ದಳು. ಇಲ್ಲಿಯವರೆಗೆ ಕುಟುಂಬ ಸದಸ್ಯರು ಉತ್ತಮ ಮಟ್ಟದ ಅಕ್ಕಿಯಿಂದ ಮಾಡಿದ ಅನ್ನ ಉಣ್ಣುತ್ತಾ ಬಂದಿದ್ದರು. ಪಲ್ಯವನ್ನಂತೂ ತುಪ್ಪದಲ್ಲೇ ಕರಿಯಲಾಗುತ್ತಿತ್ತು. ಸದಾ ಹಾಲು, ತುಪ್ಪ ಧಾರಾಳವಾಗಿ ಬಳಕೆಯಾಗುತ್ತಿತ್ತು. ಆಳುಕಾಳುಗಳಿಗೆ ದಪ್ಪನೆ ಅಕ್ಕಿ ಅನ್ನ, ಎಣ್ಣೆಯಲ್ಲಿ ಕರಿದ ಪಲ್ಯ, ಲೆಂಟಿಲ್ ಬದಲಿಗೆ ಬಟಾಣಿ ನೀಡಲಾಗುತ್ತಿತ್ತು. ಪಕ್ಕಾ ಶ್ರೀಮಂತರ ಮನೆಗಳಲ್ಲೂ ಕೂಡ ಇದೇ ಪದ್ಧತಿ ಆಚರಣೆಯಲ್ಲಿತ್ತು. ಈ ಪದ್ಧತಿ ಬಗ್ಗೆ ನಮ್ಮ ಆಳುಗಳೆಂದೂ ಚಕಾರ ಎತ್ತಿದವರಲ್ಲ. ಆದರೆ, ಇಂದು ವೃಂದಾ, ಆಳುಗಳು ಸೇರಿದಂತೆ ಮನೆಮಂದಿಗೆಲ್ಲ ಒಂದೇ ಬಗೆಯ ಅಡುಗೆ ಸಿದ್ದಪಡಿಸಿದ್ದಳು. ಅವಳ ಈ ಕ್ರಮದಿಂದ ನನಗೆ ಮಾತೇ ಹೊರಡಲಿಲ್ಲ, ನಾನು ದಿಗ್ಭ್ರಾಂತನಾಗಿಬಿಟ್ಟೆ!

ಆಳುಗಳಿಗೆ ಅನ್ನ ಇಕ್ಕುವ ವಿಚಾರದಲ್ಲಿ ಪರಪಂಚಿಕೆ ಮಾಡಬಾರದೆಂಬ ಚಿಂತನೆ ಪ್ರಾಯಶಃ ಅವಳಲ್ಲಿ ಇತ್ತೆಂದು ಕಾಣಿಸುತ್ತದೆ. ಇದೆಂತ ಬಾಲಿಶ ಚಿಂತನೆ! ಎಂತಾ ಮತಿಹೀನೆ! ಈ ಭಿನ್ನತೆ ಹಿಂದೆಯೂ ಇತ್ತು ಮುಂದೆಯೂ ಇರುತ್ತೆ ಸದಾ. ನಾನಾದರೂ ರಾಷ್ಟ್ರೀಯ ಏಕತೆಯ ಒಲವುಳ್ಳವ. ರಾಷ್ಟ್ರೀಯತೆಗೋಸುಗ ಇಡೀ ವಿದ್ಯಾವಂತ ವರ್ಗ ತಮ್ಮ ಪ್ರಾಣತ್ಯಾಗಕ್ಕೆ